ಕರ್ನಾಟಕ ಸರ್ಕಾರ

ಉಪತಹಶೀಲ್ದಾರರು ನಾಡಕಾರ್ಯಾಲಯ ಚೋರನೂರು ಇವರ ನಡವಳಿಕೆಗಳು

ಉಪಸ್ಥಿತಿ: ಶ್ರೀ ಗುರುರಾಜ್.ಕೆ ದೇಸಾಯಿ, ಉಪತಹಶೀಲ್ದಾರರು

ಅರ್ಜಿದಾರರು: ಶ್ರೀಮತಿ ಬದ್ರುನ್‌ಬೀ ಗಂಡ ಲೇಟ್ ಶೌಕತ್ ಅಲಿ ತ್ಯಾಗದಳ್

ವಿರುದ್ಧದಾರರು: 1) ಮುನೀರ್ ಬಾಷ ತಂದೆ ಲೇಟ್ ಸಾಹೇಬ್ ಹುಸೇನ್‌ಸಾಬ್

2) ಆರೀಫ್ ಹುಸೇನ್ ತಂದೆ ಲೇಟ್. ಸಾಹೇಬ್ ಹುಸೇನ್‌ಸಾಬ್, ವಸತಿ–ಹೊಸಪೇಟೆ

ವಿಷಯ:– ಜಿಗೇನಹಳ್ಳಿ ಗ್ರಾಮದ ಭೂಮಿ ಸ.ನಂ.112/ಎ ಕ್ಷೇತ್ರ 0.35 ಎಕರೆ, ಸ.ನಂ.112/ಬಿ ಕ್ಷೇತ್ರ 0.30 ಎಕರೆ, ಸ.ನಂ.114/ಎಅ ಕ್ಷೇತ್ರ 0.28 ಎಕರೆಗಳಿಗೆ ತಕರಾರು ಬಂದ ಬಗ್ಗೆ ವಿಚಾರಣೆ.

ಪೀಠಿಕೆ:– ಅರ್ಜಿದಾರರು ಮತ್ತು ತಕರಾರುದಾರರಿಗೆ ನೋಟೀಸ್ ಜಾರಿಮಾಡಲಾಯಿತು. ದಿನಾಂಕ 23.06.2016 ರಂದು ಪ್ರಕರಣ ವಿಚಾರಣೆ ಮಾಡಲಾಯಿತು. ತಕರಾರುದಾರರು ಈ ಪ್ರಕರಣದಲ್ಲಿ ತಕರಾರು ಸಲ್ಲಿಸಿದ ಅರ್ಜಿಯನ್ನು ವಾಪಾಸು ಪಡೆದಿರುತ್ತೇವೆ ಎಂದು ಒಪ್ಪಿಗೆಪತ್ರ ನೀಡಿ, ನಮ್ಮಗಳ ಯಾವುದೇ ತಕರಾರು ಇರುವುದಿಲ್ಲ, ತಪ್ಪು ಕಲ್ಪನೆಯಿಂದಾಗಿ ಪರಸ್ಪರ ಒಪ್ಪಿಗೆ ಇದ್ದಿಲ್ಲ, ಈಗ ನಾವು ತಕರಾರು ಇರುವುದಿಲ್ಲವೆಂದು ಒಪ್ಪಿಗೆ ಪತ್ರವನ್ನು ಮಾನ್ಯ ಉಪತಹಶೀಲ್ದಾರರಾದ ತಮ್ಮ ಮುಂದೆ ರೂ.20/– ಛಾಪಾ ಕಾಗದದಲ್ಲಿ ಒಪ್ಪಿಗೆ ಮತ್ತು ಹೇಳಿಕೆ ನೀಡಿರುತ್ತೇವೆ. ಕಾರಣ ತಕರಾರುದಾರರು ಸಲ್ಲಿಸಿದ ಒಪ್ಪಿಗೆ ಪತ್ರದ ಆಧಾರದ ಮೇಲೆ ಅರ್ಜಿದಾರರಿಗೆ ಪೋತಿ ವಾರಸತ್ವದ ಪ್ರಕಾರ ಖಾತೆ ವರ್ಗಾವಣೆ ಮಾಡುವುದು ಸೂಕ್ತವಿದೆಯೆಂದು ಕಂಡುಬಂದ ಹಿನ್ನಲೆಯಲ್ಲಿ ಈ ಕೆಳಗಿನಂತೆ:

ಆರ್‌ಆರ್‌ಟಿ/ತಕರಾರು/42/16–17 **ಆದೇಶ** ದಿನಾಂಕ:23.06.2016

ಪೀಠಿಕೆಯಲ್ಲಿ ವಿವರಿಸಿದ ಕಾರಣದಿಂದಾಗಿ ಅರ್ಜಿದಾರರಿಗೆ ಜಿಗೇನಹಳ್ಳಿ ಗ್ರಾಮದ ಭೂಮಿ ಸ.ನಂ.112/ಎ ಕ್ಷೇತ್ರ 0.35 ಎಕರೆ, ಸ.ನಂ.112/ಬಿ ಕ್ಷೇತ್ರ 0.30 ಎಕರೆ, ಸ.ನಂ.114/ಎಅ ಕ್ಷೇತ್ರ 0.28 ಎಕರೆಗಳಿಗೆ ಪೋತಿ ವಾರಸರ ಪ್ರಕಾರ ಖಾತೆಯಲ್ಲಿ ವರ್ಗಾವಣೆ ಮಾಡಲು ದಿನಾಂಕ 23.06.2016 ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು,

Received
17/8/16

o/c

ಉಪತಹಶೀಲ್ದಾರ
ನಾಡಕಚೇರಿ
ಚೋರನೂರ
ತಾ॥ ಸಂಡೂರು